# ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

"ಅಭಿವೃದ್ಧಿ ಭವನ" ಐವಾನ-ಎ-ಶಾಹಿ, ಕಲಬುರಗಿ-585102

ದೂರವಾಣಿ: (08472) - 256767,239556,255564, ಫ್ಯಾಕ್ಸ್ : (08472) 227527

Email: hkadbgulb@gmail.com, hkrdbklb@gmail.com Website: hkrdb.kar.nic.in


ಸಂ: ಹೈ.ಕ.ಪ್ರ.ಅ.ಮಂ/ಸಿಬ್ಬಂದಿ/15/2019-20/2616 ದಿನಾಂಕ: 08.09.2020

<u>ಪ್ರಕಟಣೆ</u>

ವಿಷಯ:- ಕ ಕ ಪ್ರ ಅ ಮಂಡಳಿ, ಕಲಬುರಗಿ ಕಾರ್ಯಲಯದಲ್ಲಿ ಮಂಜೂರಾಗಿ ತೆರವಾಗಿರುವ ಹುದ್ದೆಗಳಿಗೆದುರಾಗಿ ನಿವೃತ್ತ ಅಧಿಕಾರಿ/ಸಿಬ್ಬಂದಿಯವರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಕುರಿತು.

ಉಲ್ಲೇಖ:- ಸರ್ಕಾರದ ಪತ್ರ ಸಂಖ್ಯೆ: ಯೋಇ 83 ಹೈಕವಿ 2018 ಬೆಂಗಳೂರು ದಿನಾಂಕ 04.05.2019.

*~*~*

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಪತ್ರದನ್ವಯ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ ಮಂಜೂರಾಗಿ ತೆರವಾಗಿರುವ ಖಾಲಿ ಹುದ್ದೆಗಳಿಗೆ ನಿವೃತ್ತ ಅಧಿಕಾರಿ/ಸಿಬ್ಬಂದಿಯವರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಒಪ್ಪಿಗೆ ನೀಡಿರುತ್ತದೆ. ಆ ಪ್ರಯುಕ್ತ ಕ.ಕ.ಪ್ರ.ಅ.ಮಂಡಳಿ ಕಲಬುರಗಿ ಕಾರ್ಯಾಲಯಕ್ಕೆ ಈ ಕೆಳಕಂಡ ಹುದ್ದೆಗಳಿಗೆ ನಿವೃತ್ತ ಅಧಿಕಾರಿ/ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತಿದೆ. ಅವಶ್ಯಕ ಹುದ್ದೆಗಳ ವಿವರ ಈ ಕೆಳಗಿನಂತಿದೆ.

| ಕ್ರಮ ಸಂಖ್ಯೆ | ಹುದ್ದೆ | ಸಂಖ್ಯೆ | ಸಾಮರ್ಥ್ಯ |
|---|---|---|---|
| 1] | ಕಾರ್ಯನಿರ್ವಾಹಕ ಅಭಿಯಂತರರು | 01 | PWD, PRED, MI, RWS, KUWS, DB & KRIDL ಇಲಾಖೆಗಳ ನಿವೃತ್ತ ಕಾರ್ಯನಿರ್ವಾಹಕ ಅಭಿಯಂತರರು ಅಥವಾ ಕನಿಷ್ಠ 05 ವರ್ಷಗಳ ಅನುಭವ ಹೊಂದಿರುವ ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು. |
| 2] | ಸಹಾಯಕ ಹಣಕಾಸು ನಿಯಂತ್ರಕರು | 01 | ಸ್ಥಳೀಯ ಲೆಕ್ಕಪರಿಶೋಧನಾ ಇಲಾಖೆ, ಪ್ರಾದೇಶಿಕ ಕಚೇರಿ, PWD, ZP, PRED, MI, RWS, KUWS & DB ನಿವೃತ್ತ ಹಿರಿಯ ಉಪ ನಿರ್ದೇಶಕರು ಅಥವಾ ಕನಿಷ್ಟ 05 ವರ್ಷಗಳು ಅನುಭವ ಹೊಂದಿರುವ ಉಪನಿರ್ದೇಶಕರು |
| 3] | ಲೆಕ್ಕಾಧೀಕ್ಷಕರು | 01 | ಸ್ಥಳೀಯ ಲೆಕ್ಕಪರಿಶೋಧನಾ ಇಲಾಖೆ, ಪ್ರಾದೇಶಿಕ ಕಚೇರಿ, PWD, ZP, PRED, MI, RWS, KUWS & DB ನಿವೃತ್ತ ಲೆಕ್ಕಾಧೀಕ್ಷಕರು, ಅಥವಾ ಕನಿಷ್ಟ 05 ವರ್ಷಗಳು ಅನುಭವ ಹೊಂದಿರುವ ನಿವೃತ್ತ ಪ್ರ.ದ.ಲೆ.ಪರಿಶೋಧನಾಧಿಕಾರಿಗಳು |

| | | | |
|---|---|---|---|
| 4] | ಪ್ರಥಮ ದರ್ಜೆ ಲೆಕ್ಕ ಸಹಾಯಕರು | 02 | ಜಿಲ್ಲಾ ಪಂಚಾಯತ, ಸ್ಥಳೀಯ ಲೆಕ್ಕ ಪರಿಶೋಧನಾ ಇಲಾಖೆ ಮತ್ತು ಪ್ರಾದೇಶಿಕ ಕಚೇರಿಗಳ ನಿವೃತ್ತ ಪ್ರಥಮ ದರ್ಜೆಯ ಲೆಕ್ಕ ಸಹಾಯಕರು, |
| 5] | ಉಪನಿರ್ದೇಶಕರು | 01 | ZP, DSO ಕಚೇರಿಗಳ ನಿವೃತ್ತ ಉಪನಿರ್ದೇಶಕರು ಅಥವಾ ಕನಿಷ್ಠ 05 ವರ್ಷಗಳು ಅನುಭವ ಹೊಂದಿರುವ DSO, PWD,TP, & HEALTH TRAING CENTER, DC, CRPORATION ಕಚೇರಿಗಳ ನಿವೃತ್ತ ಸಹಾಯಕ ನಿರ್ದೇಶಕರು |
| 6] | ಸಹಾಯಕ ಸಾಂಖ್ಯಿಕ ಅಧಿಕಾರಿ | 01 | ZP, DHO, PRE, RWS, MI, PWD, DSO, CRPORATION, ವಾಣಿಜ್ಯ ತೆರಿಗೆ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳ ನಿವೃತ್ತ ಸಹಾಯಕ ಸಾಖ್ಯಿಕ ಅಧಿಕಾರಿಗಳು ಅಥವಾ ಕನಿಷ್ಠ 05 ವರ್ಷಗಳು ಅನುಭವ ಹೊಂದಿರುವ DSO,TP, MI & ತಹಸೀಲ ಕಾರ್ಯಲಯ ಇಲಾಖೆಗಳ ನಿವೃತ್ತ ಸಾಂಖ್ಯಿಕ ನೀರಿಕ್ಷಕರು |
| 7] | ಸಾಂಖ್ಯಿಕ ನೀರಿಕ್ಷಕರು | 02 | DSO,TP, MI & ತಹಸೀಲ ಕಾರ್ಯಲಯ ಇಲಾಖೆಗಳ ನಿವೃತ್ತ ಸಾಂಖ್ಯಿಕ ನೀರಿಕ್ಷಕರು ಅಥವಾ ಕನಿಷ್ಠ 05 ವರ್ಷಗಳು ಅನುಭವ ಹೊಂದಿರುವ ನಿವೃತ್ತ ಗಣತಿದಾರರು |

ಸದರಿ ನಿವೃತ್ತ ಅಧಿಕಾರಿ/ಸಿಬ್ಬಂದಿಯವರನ್ನು ಈ ಕೆಳಗಿನಂತೆ ಷರತ್ತುಗಳ ಅನ್ವಯ ಹೊರಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಲಾಗುತ್ತದೆ.

1] ನಿವೃತ್ತ ಅಧಿಕಾರಿ/ಸಿಬ್ಬಂದಿಯವರ ವಯಸ್ಸು 65 ವರ್ಷ ಮೀರಿರಬಾರದು.

2] ನಿವೃತ್ತ ಅಧಿಕಾರಿ/ಸಿಬ್ಬಂದಿಯವರು ತಮ್ಮ ಪಿಂಚಣಿ ಪತ್ರದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

3] ನಿವೃತ್ತ ಅಧಿಕಾರಿ/ಸಿಬ್ಬಂದಿಯವರನ್ನು ಹೊರಗುತ್ತಿಗೆ ಆಧಾರದ ಮೇಲೆ ಗರಿಷ್ಠ ಒಂದು ವರ್ಷದ ಅವಧಿಗೆ ಮಾತ್ರ ಪಡೆದುಕೊಳ್ಳಲಾಗುವುದು

4] ಸದರಿ ಹುದ್ದೆಗಳು ಸರಕಾರದಿಂದ ಭರ್ತಿಯಾಗುವವರೆಗೂ ಮಾತ್ರ ನೇಮಕಾತಿ ಆದೇಶ ಅನ್ವಯವಾಗುತ್ತದೆ.

5] ನಿವೃತ್ತ ಅಧಿಕಾರಿ/ಸಿಬ್ಬಂದಿಯವರು ಅವರು ನೀಡುವ ಸೇವೆಯ ಆಧಾರದ ಮೇಲೆ ಅವರ ಸೇವೆಯನ್ನು ಮುಂದುವರೆಸುವ ಹಾಗೂ ಸದರಿಯವರ ಕಾರ್ಯಕ್ಷಮತೆಯಲ್ಲಿ ಸೂಕ್ತತೆ ಇಲ್ಲದಿದ್ದರೆ ಅವರ ಸೇವೆಯನ್ನು ರದ್ದುಪಡಿಸುವ ಅಧಿಕಾರ ಪ್ರಾಧಿಕಾರಿಗಳಿಗೆ ಇರುತ್ತದೆ.

ಆದ್ದರಿಂದ ಆಸಕ್ತಿಯುಳ್ಳ ನಿವೃತ್ತ ಅಧಿಕಾರಿ/ಸಿಬ್ಬಂದಿಯವರು ಅರ್ಜಿ ಹಾಗೂ ಅವಶ್ಯಕ ದಾಖಲಾತಿಗಳೊಂದಿಗೆ ಈ ಕಾರ್ಯಾಲಯದಲ್ಲಿ **ದಿನಾಂಕ:** 21/09/2020 **ರಂದು ಸಂಜೆ: 5.30 ರೊಳಗೆ** (**ರಜಾದಿನ ಹೊರತುಪಡಿಸಿ**) ಕಛೇರಿ ವೇಳೆಯಲ್ಲಿ ಸಲ್ಲಿಸಬಹುದಾಗಿದೆ. **ದಿನಾಂಕ** 22/09/2020 **ರಂದು ಮಧ್ಯಾನ 3.30 ಗಂಟೆಗೆ ದಾಖಲಾತಿಗಳ ಪರಿಶೀಲನೆ ಸಾಯಂಕಾಲ 4.00 ಗಂಟೆಗೆ ಸಂದರ್ಶನ** ಮಂಡಳಿಯ ಕಾರ್ಯಲಯದಲ್ಲಿ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಚೇರಿಯ ಕೆಲಸದ ದಿನಗಳಲ್ಲಿ ಸಂಪರ್ಕಿಸಿ, ಪಡೆದುಕೊಳ್ಳಬಹುದಾಗಿದೆ.

ಕಾರ್ಯದರ್ಶಿಗಳು
ಕ ಕ ಪ್ರ ಅ ಮಂಡಳಿ ಕಲಬುರಗಿ